Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

ಸಂಪುಟ 27 ಸಂಚಿಕೆ 66] ಮಂಗಳವಾರ 28—12—43 [ಕಾಲಾಣೆ

ಭಾರತದ ಸ್ವಾತಂತ್ರ್ಯ ಎತ್ತಲಕಡೆ

ಭಾರತದ ಸ್ವಾತಂತ್ರ್ಯ

ಭಾರತಕ್ಕೆ ಸ್ವಾತಂತ್ರ್ಯ ಬರಬೇಕಾದರೆ ಭಿಕ್ಷ ಬೇಡಿದರೆ ಸಿಗುವುದಿಲ್ಲ, ಅದಕ್ಕೆ ಕಾಳಗ ಮಾಡಬೇಕು, ಎಂದು ಹಿಂದೂ ಮಹಾಸಭೆಯ ಪ್ರೆಸಿಡೆಂಟರಾದ ಡಾ || ಮುಕರ್ಜಿಯವರು ಅಮೃತಸರಿನಲ್ಲಿ ಹೇಳಿದರು.

ಬಂಗಾಳಾಕ್ಕೆ ಸಹಾಯ

ಅಮೇರಿಕಾದ ರೆಡ್ ಕ್ರಾಸ್‌ನವರು ಬಂಗಾಳಾದ ಕ್ಷಾಮಕ್ಕೆ 5 ಲಕ್ಷ ಪೌಂಡು ಹಾಲನ್ನೂ 20 ಲಕ್ಷ (10 ಸಾವಿರ ಮಕ್ಕಳಿಗೆ 3 ತಿಂಗಳಿಗೆ ಸಾಕು) ವಿಟಮಿನ್ ಗುಳಿಗೆಗಳನ್ನು ದಾನ ಮಾಡಿರುತ್ತಾರೆ.

ಅಸಮಾಧಾನ

ಬಂಗಾಳಾ ಗವರ್ನರಾಗಿ ಮಿ || ಕಾಸಿಯವರನ್ನು ನೇಮಕ ಮಾಡಿದರೆಂದು ತಮ್ಮ ಅಸಮಾಧಾನವನ್ನು ಬಂಗಾಳಾ ಕಾಂಗ್ರೆಸ್ ಪಾರ್ಟಿಯವರು ಮುಂದಿನ ಅಧಿವೇಶನದಲ್ಲಿ ವ್ಯಕ್ತಪಡಿಸುವರು.

ಬೈಸಿಕಲ್‌ಗಳು ಬಂದವು

ಈಗಾಗಲೇ 15 ಸಾವಿರ ಪರದೇಶೀ ಬೈಸಿಕಲ್‌ಗಳು ಭಾರತಕ್ಕೆ ಬಂದಿವೆ. ಆಹಾರ ಪದಾರ್ಥ ತರಿಸಲು ಹಡಗಿಲ್ಲದಿರುವಾಗ ಬೈಸಿಕಲ್ ಕಳುಹಿಸಲು ಮಿ || ಅಮರಿಯವರಿಗೆ ಸ್ಥಳವಿದೆಯೇ ?

ಶತ್ರು ನೌಕಾ ಪತನ

ಜರ್ಮನರ ' ಸೆಡರ್ಲಿಟ್ಜ್ ' ಎಂಬ ಯುದ್ಧ ನೌಕೆಯನ್ನು ಮಿತ್ರರು ಹುಡಕಿ ಹುಡಕಿ ಗುಂಡುಗಳಿಂದ ಹೊಡೆದು ಜಲಸಮಾಧಿ ಮಾಡಿದರು. ಇದು 26 ಸಾವಿರ ಟನ್ ತೂಕದ್ದು. ಇದರಲ್ಲಿ ಕೆಲಸ ಮಾಡುತ್ತಿದ್ದವರು 1481 ಅಲ್ಲದೆ 9 ಹನ್ನೊಂದು ಅಂಗುಲದ ಗುಂಡುಗಳೂ 12 ಐದೂಮುಕ್ಕಾಲು ಅಂಗುಲದ ಗುಂಡುಗಳೂ, ಇನ್ನೂ ಕೆಲವು ಚಿಕ್ಕಚಿಕ್ಕ ಗುಂಡು ಹೊಡೆಯುವ ಶಕ್ತಿಯಿದ್ದಿತು.

ಮೊನ್ನೆ ಭಾನುವಾರ ಜಪಾನಿ ವಿಮಾನಗಳು ಚಿಟಿಗಾಂಗ್ ಮೇಲೆ ಧಾಳಿ ಮಾಡಿ, ತಮ್ಮ 10 ವಿಮಾನಗಳನ್ನು ನಷ್ಟಪಡಿಸಿಕೊಂಡರು.

ಮಿಲಿಟರಿ ಲಾರಿ

(ಸ್ವಂ. ಸು.) ಮೈಸೂರು ಡಿ. 27

ಸಂಜಸಗೂಡು ಮುಂತಾದ ಕಡೆಗಳಿಂದ ಪ್ರತಿ ನಿತ್ಯವೂ ಒಂದುಸಾರಿಗವು ಮಿಲಿಟರಿ ಲಾರಿಗಳಿಗೆ ದೊಡ್ಡಕೆರೆ ಏರಿ ಮೇಲೆಬಂದುಹೋಗಬೇಕೆಂಬ ವಿಧಾಯಕವಿದ್ದರೂ ಅದನ್ನು ನಿರಾಕರಿಸಿ ಊರವಳಗೆಲ್ಲಾ ನುಗ್ಗುತ್ತಿರುತ್ತಾರೆ. ಮತ್ತು ಜನರು, ಎಂಡಿಗಳು ಕಾರುಗಳು ಬರುತ್ತಿರುವಾಗ ಎಂಥಾ ಸಂಧಿಗ್ಧ ಪ್ರಸಂಗದಲ್ಲೂ ಮೊದಲೇ ಮಿಲಿಟರಿ ಲಾರಿಗೆ ಪ್ರಾಶಸ್ತ್ಯ ಕೊಟ್ಟು ದಾರಿಬಿಡಿಸಿ ಹೊರಡುವ ಸಂಪ್ರದಾಯ ಹೆಚ್ಚಾಗಿದೆ. ಹೀಗೆ ಒಂದು ಸಂದರ್ಭದಲ್ಲಿ ಅರಮನೆ ಕಾರಿಗೂ ನಡಯಿತು. ಸರಿಯಾದ ವ್ಯವಸ್ಥೆ ಪಂಡಿತ ಎಪರ್ಾಡಾಗಬೇಕು.

ಇಜ್ಜಲಿನ ಅಭಾವ

ಬೊಂಬಾಯಿನಲ್ಲಿ ಈಗ ಇಜ್ಜಲಿಗೆ ಕಷ್ಟವಾಗಿದೆ. ಹಿಂದೆ 1 ಮಣಕ್ಕೆ 11 ಆಣೆ ಇದ್ದುದು ಈಗ 2 ರೂ. ಆಗಿದೆ.

ಪಾಕಿಸ್ಥಾನ ನೋಡುವರೆ ?

25—12—43 ಈ ದಿವಸಕ್ಕೆ ಅಂದರೆ ಕ್ರಿಸ್‌ಮಸ್ ದಿವಸಕ್ಕೆ ಮಿ || ಜಿನ್ನಾರವರಿಗೆ 66 ವರ್ಷ ತುಂಬಿತು. ಇವರ ಜೀವಿತ ಕಾಲದಲ್ಲಿ ಪಾಕಿಸ್ಥಾನ ನೋಡುವರೇ ?

ಅದ್ಯಾಕೆ ?

ರೋಂಗೆ ಮುಂದಿನ ಏಪ್ರಿಲ್‌ವರೆವಿಗೆ ಮಿತ್ರರಿಗೆ ಹೋಗಲು ಆಗುವುದಿಲ್ಲವಂತೆ.

ಅಲ್ಲೂ ಇವರ ಗೋಳೇ ?

ಯೂರೋಪಿನ ನಾನಾ ಭಾಗಗಳಲ್ಲಿ ಈಗಾಗಲೇ ಕ್ಷಾಮ ತಲೆ ದೋರುತ್ತಿವೆ. ಮಾಡಿದ್ದುಣ್ಣೋ ಮಹಾರಾಯ !

ಸರ್ಕಾರಿ ಪ್ರಕಟಣೆ

ರಾಗಿ, ಜೋಳ, ಇತ್ಯಾದಿ ಧಾನ್ಯಗಳನ್ನು ಕಟಾವು ಮಾಡಲು ಸರ್ಕಾರಿ ಅಪ್ಪಣೆಯಾಗದೆ ಕಟಾವು ಮಾಡಕೂಡದೆಂದು ಅನೇಕರು ಹೆದರಿರುವರು. ಕಟಾವು ಮಾಡಲು ಯಾರ ಅಪ್ಪಣೆಯೂ ಬೇಡ. ರೈತನು ಕಟಾವು ಮಾಡಿ ತನ್ನ ಜಮೀನಿನಿಂದ ಹತ್ತಿರದ ತನ್ನ ಮನೆಗೆ ತರಲು ಯಾವ ಅಭ್ಯಂತರವೂ ಇಲ್ಲ. ಇತರ ಕಡೆಗೆ ಸಾಗಿಸಬೇಕಾದರೆ ಅನುಮತಿ ಬೇಕು ಎಂದು ಸರ್ಕಾರದ ಪಬ್ಲಿಸಿಟಿ ಆಫೀಸರು ಒಂದು ಪ್ರಕಟಣೆ ಹೊರಡಿಸಿರುತ್ತಾರೆ.

ಅಳಿಯ ಮಾವನಲ್ಲಿ ಒಪ್ಪಂದದ ಪ್ರಯತ್ನ

ಮಗಳ ಮಭ್ಯಸ್ತಿಗೆ

ಮುಸೋಲಿನಿಗೂ ಅವನ ಅಳಿಯನಾದ ಕೌಂಟ್ : ಸಿಯೋನಿಯೋವಿಗೂ ಮನಸ್ತಾಪವಾಗಿ ಸಿಯೋನಿಯೋ ಮೇಲೆ ರಾಜದ್ರೋಹದ ಆಪಾದನೆ ಹೊರಿಸಲಾಗಿತ್ತೆಂದೂ ಸುದ್ದಿ ಹರಡಿತ್ತು. ಮುಸೋಲಿನಿಯ ಮಗಳಾದ ಎಡ್ಡಿಯುಸ್ಸ್‌ಅಂದರೆ ಸಿಯೆನಿಯ ಹೆಂಡತಿಯು ಈಗ ತನ್ನ ಗಂಡನಿಗೂ ತಂದೆಗೂ ಒಡಂಬಡಿಕೆ ಮಾಡಿಸುವ ಪ್ರಯತ್ನದಲ್ಲಿರುವಳೆಂದು ತಿಳಿಯಬಂದಿದೆ.

.... ಪ್ರತಿ ದಿನ 2 ಆಟಗಳು ....
೧ನೇ ಆಟ ೬-೩೦ ಕ್ಕೆ — ೨ನೇ ಆಟ ೧೦ ಕ್ಕೆ
ತಾ || 1, 2 ನೆ ಜನವರಿ ಶನಿವಾರ ಭಾನುವಾರ 3 ಆಟಗಳು
3-30, 6-30, ಮತ್ತು 10-30 — 3-30 ರ ಆಟವು ಸ್ತ್ರೀಯರಿಗೆ ಮಾತ್ರ
43 ವರ್ಷಗಳಿಂದ ಹೆಸರುವಾಸಿಪಡೆಯುತ್ತಾ ಬಂದಿರುವ
ಬಾಂಬೆ ಜಿ. ಎ. ಸರ್ಕಸ್
(ಸ್ಥಾಪನೆ 1901)
ಸ್ಥಳ — ಜೀವಣ್ಣರಾಯನಕಟ್ಟೆ, ಮೈಸೂರು
೧೦೧ ಆಟಗಾರರು, ೧೦೧ ಮೃಗಗಳು, ೨೪ ಸ್ತ್ರೀಯರ ಜಮ್ನಾಸ್ಟಿಕ್
ಡ್ಯಾನ್ಸುನೋಡಲು ಮರೆಯಬೇಡಿ
ಜೀವದ ವಿಮೆಸನ್ನು ಸಂಗಿ, ಅದರಮೇಲೆ 2 ಕೊಡ ನೀರನ್ನು ಕುಡಿದುಹೊಟ್ಟೆಯಲ್ಲಿರಿಸಿಕೊಂಡು, ನಂತರ ಜೀವಸಹಿಕವಿಮಾನನ್ನೂ ನೀರನ್ನೂ ಹೊಂಗೆ ಪೂರಾ ತೆಗೆಯುವ ಅದ್ಭುತ ಸಾಹಸವನ್ನು ತಪ್ಪದೇ ನೋಡಿರಿ
— ಫ್ಲೈಯಿಂಗ್ ಟ್ರಪೀಸ್ ಆಟವನ್ನು ಜರೂರು ನೋಡಿರಿ. —

— ಶಕ್ತಿಸುಧಾ —
ದೇಹದೌರ್ಬಲ್ಯ, ಬಲಹೀನತೆ ಇವಗಳನ್ನು
ಹೋಗಲಾಡಿಸಿ ವೀರ್ಯಾಭಿವೃದ್ಧಿ ಮಾಡಿ
ದೇಹಕ್ಕೆ ಕಾಂತಿಯನ್ನು ಉಂಟುಮಾಡುತ್ತೆ
ಈವತ್ತೇ ಕೊಂಡು ಉಪಯೋಗಿಸಿರಿ!
ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.
೧೦೬೭, ಚಾಮರಾಜಪುರಂ ಮೈಸೂರು.

ಜಪಾನಿನ ಸಂಪತ್ತು

ಅಮೇರಿಕಾದ ಲೋಕವಿಖ್ಯಾತ ಪತ್ರಿಕೆಯಾದ 'ವಾಲ್ ಸ್ಟ್ರೀಟ್ ಜನ್ನಲ್' 30-12-42 ರಲ್ಲಿ ಈ ರೀತಿ ಬರೆದಿದೆ:—

ಜಪಾನು ಈಚಿನ ಯುದ್ಧದಿಂದ ಹೇರಳವಾದ ಐಶ್ವರ್ಯ ಸಂಪಾದಿಸಿದೆ. ಇವೆಲ್ಲಾ ನಮಗೆ ಸೇರಿತ್ತು. ಪ್ರತಿ ದಿವಸ ಜಪಾನಿನ ಬೊಕ್ಕಸಕ್ಕೆ ಈ ಉತ್ಪತ್ತಿಗಳು ಸೇರುತ್ತಾ ಜಪಾನು ಬಲದಲ್ಲಿ ಉನ್ನತ ಸ್ಥಿತಿಗೆ ಬರುತ್ತಿದೆ. ಇದು ಒಂದು ದಿವಸವೂ ಮುಂದುವರಿಯದ ಹಾಗೆ ನಾವು ಜಪಾನಿನ ಬಲ ಕತ್ತರಿಸಬೇಕು.

ಪೆಸಿಫಿಕ್ಕಿನಿಂದ ಜಪಾನಿಗೆ 1 ವರ್ಷಕ್ಕೆ ಕಬ್ಬಿಣ 26 ಲಕ್ಷ ಟ್ಕ, ರಬ್ಬರ್ 9 ಲಕ್ಷ ಟ್ಕ, ಸಕ್ಕರೆ 13 ಲಕ್ಷ 76 ಸಾವಿರ ಟ್ಕ, ಕ್ವಿನೈನ್ 11 ಸಾವಿರ ಟ್ಕ, ಧಾನ್ಯ 23 ಲಕ್ಷ ಟ್ಕ, ಅಕ್ಕಿ 66 ವರೆ ಲಕ್ಷ ಟ್ಕ, ಮನಿಲ 1 ಮುಕ್ಕಾಲು ಟ್ಕ ಇತ್ಯಾದಿ. ಅಲ್ಲದೆ ಜಪಾನಿನಲ್ಲಿ ರೇಷ್ಮೆ ಕಸಬು ಅನಾದಿಯಾದುದು. ಚೈನಾದಿಂದ ಹೊಳ್ಳೆಹೊಡೆಯುತ್ತಿದೆ. ಜಪಾನರನ್ನು ನಾವು ನಮ್ಮ ರಾಜ್ಯಗಳಿಂದ ಓಡಿಸಬೇಕು, ಇಲ್ಲವಾದರೆ ನಮಗೆ ತುಂಬಾ ನಷ್ಟವಾಗುವುದು. ರಬ್ಬರನ್ನು ನಾವು ಆಫ್ರಿಕಾದಲ್ಲಿ ಬೆಳೆದು ಅಪರ ಉಪಯೋಗವನ್ನು ನಾವು ಅಮೇರಿಕಾದಲ್ಲಿ ಮಾಡುತ್ತಿರುವೆವು. ನಾವು ಎಷ್ಟು ಕೃತಕ ರಬ್ಬರನ್ನು ತಯಾರಿಸಿದರೂ ಅದು ಸಾಲದಾಗಿದೆ. ಜಪಾನು ಮಲೆಯಾ, ಡಚ್ ಈಸ್ಟ್ ಇಂಡೀಸಿನಿಂದ ರಬ್ಬರನ್ನು ಪಡೆದು ಅದರಿಂದ ಪೆಟ್ರೋಲ್ ಮುಂತಾದ ಬಗೆಬಗೆ ಎಣ್ಣೆಗಳನ್ನು ತಯಾರ್ಮಾಡುವುದು. ಸ್ಯಪಂಜದ ರಬ್ಬರಿನಲ್ಲಿ ಶೇಕಡ 90 ರಷ್ಟು ಈಗ ಜಪಾನಿನ ಕೈಲಿದೆ. 1840 ರಲ್ಲಿ ಜಪಾನು ಈಗ ತಾನು ಜಯಿಸಿರುವ ಸ್ಥಳಗಳಿಂದ 12 ಲಕ್ಷ ಟ್ಕ ರಬ್ಬರನ್ನು ಆಮದು ಮಾಡಿಕೊಂಡಿದೆ. ಯುದ್ಧಕ್ಕೆ ಮುಂಚೆ ಆ ದೇಶಗಳಿಂದ 69 ಸಾವಿರ ಟ್ಕ ಆಮದು ಮಾಡಿಕೊಳ್ಳುತ್ತಿತ್ತು. ಜಪಾನು ಲಯಾವಲ್ಲಿರುವ ಕೂಲಲಂಪೂರ್‌ನಲ್ಲಿ ಈಗಾಗಲೇ ತಿಂಗಳಿಗೆ 100 ಟ್ಕ ಅತಿ ಶ್ರೇಷ್ಟವಾದ ಗಾಸೊಲಿಕ್ ತಯಾರ್ಮಾಡುತ್ತಿದೆ.

ರಬ್ಬರಿನಿಂದ ಪೆಟ್ರೋಲ್ ಮತ್ತು ಇತರ ವಿಧವಾದ ಎಣ್ಣೆಗಳನ್ನು ತಯಾರ್ಮಾಡುವುದು ಅತಿ ಸುಲಭ ಪೆಟ್ರೋಲಿನಿಂದ ಕೃತಕ ರಬ್ಬರ್ ಮಾಡುವುದು ಅತಿ ಕಷ್ಟ. ಹೀಗೆ ಜಪಾನು ವರ್ಷಕ್ಕೆ ಈ ರಬ್ಬರಿನಿಂದ ೪ ವರೆ ಲಕ್ಷ ಟ್ಕ ಶ್ರೇಷ್ಟವಾದ ಪೆಟ್ರೋಲು ಮತ್ತು ಇಷ್ಟೇ ಇತರ ವಿಧದ ಎಣ್ಣೆಯನ್ನು ತಯಾರ್ಮಾಡುವಂತಿದೆ.

ಈಗ ಜಪಾನಿಗೆ ದೊರೆತಿರುವ ಕಚ್ಚಾ ಪದಾರ್ಥಗಳು ಹಿಂದೆ ಯಾವ ರಾಜ್ಯಾಂಗಕ್ಕೂ ಸಿಕ್ಕಿರಲಿಲ್ಲ.

ನಾವು ಒಂದು ದಿವಸವೂ ನಿಧಾನ ಮಾಡಬಾರದು- ನಿಧಾನವಾದಷ್ಟೂ ಶತ್ರುವು ಬಲಗೊಳ್ಳುತ್ತಾನೆ. ಅದನ್ನು ನಮ್ಮ ಮೇಲೆ ಪ್ರಯೋಗಿಸುತ್ತಾನೆ. ಫಿಲಿಪೈನ್‌ನಲ್ಲಿ 1800 ರಲ್ಲಿ ೪೦ ಜಪಾನೀಯರು ಮಾತ್ರ ಇದ್ದರು. 1938 ರಲ್ಲಿ 15 ಸಾವಿರಕ್ಕೆ ಜನಸಂಖ್ಯೆ ಏರಿತು. ಇವರು ವರ್ತಕರಾಗಿ ಬಂದವರು, ಇನ್ನು ಕೆಲವರು ಅಲ್ಲೇ ವಾಸಮಾಡುವುದ

ಟೆಹರಾನ್

— ಎಂಥಹ ಸ್ಥಳ —

ಟೆಹರ್ಕ್ ಈರಾನಿನ ರಾಜಧಾನಿ. ಇದು ಸ್ಟಾಲಿಕ್, ಚರ್ಚಿಲ್, ರೂಸ್‌ವೆಲ್ಟರು ಸೇರಿದ್ದ ಸ್ಥಳ. ರಷ್ಯಾಕ್ಕೆ ಇಲ್ಲಿಂದಲೇ ಯುದ್ಧದ ಪದಾರ್ಥಗಳು ರವಾನೆಯಾಗಬೇಕು.

ಟೆಹರ್ಕ್ ರಷ್ಯಾ ಗಡಿಗೆ 70 ಮೈಲಿ ದೂರದಲ್ಲಿದೆ. ಇಲ್ಲಿಂದ ಮಾಸ್ಕೋ ವಿಗೂ, ಕೈರೋಗೂ ವಿಮಾನ ಮೂಲಕ 1500 ಮೈಲಿಗಳು. ಈ ಎರಡು ನಗರಗಳಲ್ಲಿಯೂ ಮಿತ್ರರ ನಾಯಕರು ಕಲೆತಿದ್ದು, ಮುಂದಿನ ಭವಿಷ್ಯ ಚರ್ಚೆ ಮಾಡಿದ್ದು, ನಿರ್ಧಾರಕ್ಕೆ ಬಂದದ್ದು.

ಹಿಂದೆ ಈರಾಕ್ ಒಂಟಿಕಾನ್ವಾಯ್ ಸೇರುವ ಸ್ಥಳವಾಗಿತ್ತು. ಇಲ್ಲಿ ನವಿಲುಗಳೂ, ಪೌರ್ವ ದೇಶದ ಅಂಗಡಿಗಳೂ ಯಥೇಚ್ಚವಾಗಿದ್ದವು.

ಕ್ಕೆ ಪ್ರಾರಂಭಿಸಿದರು. ಅಮೇರಿಕಾ ಸರಕಾರವು ಇವರನ್ನು ಓಡಿಸಲು ಪ್ರಯತ್ನ ಪಟ್ಟು ವಿಫಲವಾಯಿತು

ನಮಗೆ ಇದ್ದುದನ್ನು ಜಪಾ ಕಿತ್ತು ಕೊಂಡಿದೆ. ನಾವು ಈ ಕಚ್ಚಾ ಪದಾರ್ಥಗಳಿಗೋಸ್ಕರವಲ್ಲವೇ ಯುದ್ಧ ಮಾಡುತ್ತಿರುವುದು. ಜಪಾನು ದಿವಸ ದಿವಸವೂ ಈ ಪದಾರ್ಥಗಳನ್ನು ಶೇಖರಿಸಿ ಒಲಗೊಳ್ಳುತ್ತಿದೆ. ನಾವು ಸುಮ್ಮನಿರದೆ ಆದಷ್ಟು ಬೇಗನೆ ಜಪಾನನ್ನು ನಾಶಮಾಡಬೇಕು.

ಈಗ ಯುದ್ಧದ ದೆಸೆಯಿಂದ, ಅಮೇರಿಕಾದಲ್ಲಿ ತಯಾರಾಗಿ ಅಲ್ಲಿಂದ ಬರುವ ಟ್ಯಾಂಕರ್, ಟ್ಯಾಂಕು, ರೈಲ್ವೇ ಇಂಜ್, ಸೇನೆಗಳಿಗೆ ಬೇಕಾಗುವ ಯುದ್ಧೋಪಕರಣಗಳು ರೈಲಿನಲ್ಲಿಯೂ, ಮೋಟಾರು ಲಾರಿಯಲ್ಲಿಯೂ ರಷ್ಯಾಕ್ಕೆ ಸಾಗಿಹೋಗುತ್ತಿವೆ. ದಿವಸದ 24 ಗಂಟೆಯಲ್ಲೂ ವಿಮಾನಗಳು ರಷ್ಯಾಕ್ಕೆ ಹಾರಿಹೋಗುವುದನ್ನು ನೋಡಬಹುದು.

ಟೆಹರಾನ್ನಿಗೆ 700 ಮೈಲಿ ದೂರದಲ್ಲಿ ಪರ್ಷಿಯ ಕೊಲ್ಲಿಯಲ್ಲಿ ಅಮೇರಿಕಾದಿಂದ ಒಂದ ಜಹಜುಗಳಿಂದ ಸಾಮಾನು ಗಳನ್ನಿಳಿಸುತ್ತಾರೆ. ವಿಮಾನಗಳು ಇಲ್ಲೇ ಜೋಡಿಸಲ್ಪಟ್ಟು ರಷ್ಯ ಚಾಲಕರ ವಶಕ್ಕೆ ಒಪ್ಪಿಸಲಾಗುತ್ತದೆ.

ಟೆಹರಾನಿನಲ್ಲಿ ಪ್ರಜಾಸಂಖ್ಯೆ 7 ವರೆ ಲಕ್ಷ ; ನಗರವು 7 ಕಾಲು ಚದರು ಮೈಲಿಗಳು. ಟೆಹರ್ಕ್ ಹವ ಯಾವಾಗಲೂ ಶಕೆಯಾಗಿರುವುದು. ಬೇಸಿಗೆಯಲ್ಲಿ 129 ಡಿಗ್ರಿ ಶಕೆಯಿರುವುದು.

ಇರಾಕ್ 9-9-43 ರಲ್ಲಿ ಜರ್ಮನರ ಮೇಲೆ ಯುದ್ಧ ಹೂಡಿ, ಮಿತ್ರಪಕ್ಷದವರ ಸಂಗಡ ಸೇರಿತು.

Ranjit — Najma

3 ನೇ ವಾರ

ರಣಜಿತ್ ಟಾಕೀಸ್

ಅಶೋಕ ಕುಮಾರ್

ವೀಣಾ — ಸುತಾರ

ಕುಮಾರ್ — ಯೂಕೂಬ್

ಮುಂತಾದವರು ಪಾತ್ರವಹಿಸಿರುವ

ನಜ್ಲ

ಅಮೋಘ ಹಿಂದಿ ಚಿತ್ರ

ಪ್ರತಿ ದಿನ 3 ಆಟಗಳು

Opera — —. Bhaktaraj

— ಆಪೆರಾದಲ್ಲಿ —

"ಭಕ್ತರಾಜ್"

ಅಮೋಘ ಒಂದೀ ಚಿತ್ರ

ವಿಷ್ಣುಪಂತ್ ಪಾಗ್ನೀಸ್

ವಾಸಂತಿ, ದೀಕ್ಷಿತ್ — ಮುಬಾರಕ್

ಕಾಂತಿಲಾಲ್, ಬಿಲಿಮೋರಿಯಾ

— ಮುಂತಾದವರು ಪಾತ್ರವಹಿಸಿರುವರು

ಪ್ರತಿ ದಿನ 3 ಆಟಗಳು

ಕಡೇ 2 ತರಗತಿಗಳು 0-5-0, 0-3-0

ಇತರ ತರಗತಿಗಳು ಎಂದಿನಂತೆ.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.